

ಶುಕ್ರವಾರ ಬೆಂಗಳೂರಿನಲ್ಲಿ ನಡೆಯಲಿರುವ ಐಪಿಎಲ್ ಕ್ರಿಕೆಟ್ ಟೂರ್ನಿಯ ಉದ್ಘಾಟನಾ ಸಮಾರಂಭದಲ್ಲಿ ನೃತ್ಯ ಪ್ರದರ್ಶನ ನೀಡಲಿರುವ ಅಮೆರಿಕದ ರೆಡ್‌ಸ್ಕಿನ್ಸ್ ತಂಡದ ಮಹಿಳೆ ಗುರುವಾರ ತಯಾರಿ ನಡೆಸಿದ ರೀತಿ. –ಪ್ರಜಾವಾಣಿ ಚಿತ್ರ

# ಐಪಿಎಲ್: ಇಂದು ಮೊದಲ ಪಂದ್ಯ

ಬೆಂಗಳೂರು: ಕ್ರಿಕೆಟ್ ಪ್ರೇಮಿಗಳು ಕುತೂಹಲದಿಂದ ಕಾಯುತ್ತಿರುವ ಕ್ಷಣ ಎದುರಾಗುತ್ತಿದೆ. ಕ್ರಿಕೆಟ್ ಜಗತ್ತಿನಲ್ಲಿ ಹೊಸ ಇತಿಹಾಸ ಬರೆಯಲು ಸಜ್ಜಾಗಿರುವ ಭಾರತೀಯ ಪ್ರೀಮಿಯರ್ ಲೀಗ್ (ಐಪಿಎಲ್) ಟ್ವೆಂಟಿ–20 ಟೂರ್ನಿಗೆ ಶುಕ್ರವಾರ ಸಂಜೆ ಚಾಲನೆ ದೊರೆಯಲಿದೆ.

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹೊನಲು ಬೆಳಕಿನಲ್ಲಿ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ರಾಹುಲ್ ದ್ರಾವಿಡ್ ಸಾರಥ್ಯದ ಬೆಂಗಳೂರು ರಾಯಲ್ ಚಾಲೆಂಜರ್ಸ್ ಹಾಗೂ ಸೌರವ್ ಗಂಗೂಲಿ ನೇತೃತ್ವದ ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ಪೈಪೋಟಿ ನಡೆಸಲಿವೆ. ಈ ಮಧ್ಯೆ, ಟೂರ್ನಿಯ ವರದಿ ಸಂಬಂಧ ಸುದ್ದಿ ವಾಹಿನಿಗಳು ಹಾಗೂ ಐಪಿಎಲ್ ಆಡಳಿತದ ನಡುವೆ ಉದ್ಭವಿಸಿದ್ದ ವಿವಾದವು ಬಗೆಹರಿದಿದೆ.

# ಬೆಂಗಳೂರಿನ ವೊಕಾರ್ಡ್ ಆಸ್ಪತ್ರೆ ವೈದ್ಯರ ಸಾಧನೆ